



ನಗರದಲ್ಲಿ ಗುರುವಾರ ಸುರಿದ ಮಳೆಗೆ ಸಂಪಿಗೆ ರಸ್ತೆ ಜಲಾವೃತವಾಗಿ ವಾಹನ ಸವಾರರು ಪರದಾಡಿದರು – ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್(ಎಡ ಚಿತ್ರ) ಮಳೆನೀರಿಗೆ ಕಾಲುವೆಯಂತಾಗಿರುವ ನಗರದ ಮೈಸೂರು ರಸ್ತೆ –ಪ್ರಜಾವಾಣಿ ಚಿತ್ರ/ಪುಷ್ಕರ್ ವಿ.

### ಹಲವೆಡೆ ಬಿರುಗಾಳಿ, ಗುಡುಗು ಸಹಿತ ಭಾರಿ ಮಳೆ; ರಸ್ತೆಯಲ್ಲಿ ನಿಂತ ನೀರು, ಸಾಲುಗಟ್ಟಿ ನಿಂತ ವಾಹನಗಳು

# ನಗರದಲ್ಲಿ ಮುಂದುವರಿದ ಪೂರ್ವ ಮುಂಗಾರು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದಲ್ಲಿ ಮುಂಗಾರುಪೂರ್ವ ಮಳೆ ಬುಧವಾರವೂ ಮುಂದುವರಿಯಿತು. ಸಂಜೆ ವೇಳೆಗೆ ಬಿರುಗಾಳಿ, ಗುಡುಗು, ಮಿಂಚು ಸಹಿತ ಭಾರಿ ಮಳೆಯಾಯಿತು. ತಡರಾತ್ರಿಯವರೆಗೂ ನಗರದ ಬಹುತೇಕ ಪ್ರದೇಶಗಳಲ್ಲಿ ಮಳೆ ಸುರಿಯಿತು.

ಹಂಪಿನಗರ, ನಂದಿನಿ ಬಡಾವಣೆ, ಮಾರುತಿ ಮಂದಿರ, ನಾಗಪುರ, ನಾಯಂಡಹಳ್ಳಿಯಲ್ಲಿ ಅತಿಹೆಚ್ಚು ಮಳೆಯಾಯಿತು. ನಗರದ ವಿವಿಧೆಡೆ ರಸ್ತೆಗಳಲ್ಲಿ ನೀರು ನಿಂತಿದ್ದರಿಂದ ವಾಹನ ಸಂಚಾರಕ್ಕೆ ತೊಡಕು ಉಂಟಾಯಿತು. ವಾಹನಗಳು ನಿಧಾನ ಗತಿಯಲ್ಲಿ ಸಾಗಿದ್ದರಿಂದ ದಟ್ಟಣೆ ವಿಪರೀತಗೊಂಡಿತು.

ಚಾಲುಕ್ಯ ವೃತ್ತದಿಂದ ಹೆಬ್ಬಾಳ, ಸುಮನಹಳ್ಳಿ ಜಂಕ್ಷನ್, ನಾಯಂಡಹಳ್ಳಿ ಜಂಕ್ಷನ್ ಹಾಗೂ ಸುತ್ತಮುತ್ತ ವಿಪರೀತ ದಟ್ಟಣೆ ಉಂಟಾಯಿತು. ನಗರದ ಅನಿಲ್ ಕುಂಬ್ಳೆ ವೃತ್ತದ ಬಳಿ ರಸ್ತೆ ಮೇಲೆಯೇ ನೀರು ನಿಂತುಕೊಂಡಿತ್ತು. ಬಿಆರ್‌ವಿ ಜಂಕ್ಷನ್ ಕಡೆಗೆ ಸಾಗುತ್ತಿದ್ದ ವಾಹನಗಳು ನಿಧಾನವಾಗಿ ಸಾಗಿದವು.

ಪಂತರಪಾಳ್ಯ ಹೊರವರ್ತುಲ ರಸ್ತೆ, ಹಳೇ ಉದಯ ಟಿ.ವಿ ಜಂಕ್ಷನ್, ಮಲ್ಲೇಶ್ವರದ ಸಂಪಿಗೆ ರಸ್ತೆ, ಬಿನ್ನಿ ಮಿಲ್ ಹಾಗೂ ಸುತ್ತಮುತ್ತಲಿನ ಕೆಲ ರಸ್ತೆಗಳಲ್ಲಿಯೇ ನೀರು ಹರಿಯಿತು. ರಾಜಾಜಿನಗರ, ಯಶವಂತಪುರ, ಶಿವಾಜಿನಗರ, ಆರ್‌ಟಿ ನಗರ, ಮೈಸೂರು ರಸ್ತೆ, ಕನಕಪುರ ರಸ್ತೆ ಸೇರಿದಂತೆ ನಗರದ ಬಹುತೇಕ ಕಡೆಗಳಲ್ಲಿ ಉತ್ತಮ ಮಳೆಯಾಗಿದೆ.

**70 ಮರಗಳು ಧರೆಗೆ:** ಬಿಬಿಎಂಪಿ ವ್ಯಾಪ್ತಿಯ ಎಂಟು ವಲಯಗಳಲ್ಲಿ ಗುರುವಾರ ಸುರಿದ ಮಳೆ ಹಾಗೂ ಬಿರುಗಾಳಿಗೆ 70 ಮರಗಳು ಧರೆಗುರುಳಿವೆ. ಇದರಲ್ಲಿ 55 ಮರಗಳನ್ನು ತೆರವು ಮಾಡಲಾಗಿದೆ. 171 ಪ್ರದೇಶಗಳಲ್ಲಿ ಕೊಂಬೆಗಳು ಬಿದ್ದಿವೆ. ಇರಲ್ಲಿ 119 ಕೊಂಬೆಗಳನ್ನು ತೆರವು ಮಾಡಲಾಗಿದೆ ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.

**ಒಂದು ವಾರ ಮಳೆ:** ಮುಂದಿನ ಒಂದು ವಾರ ಬಿರುಗಾಳಿ, ಗುಡುಗು ಸಹಿತ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

**36 ಸ್ಥಳಗಳ ಗುರುತು:** ಮಳೆ ಬಂದಾಗ ಪ್ರವಾಹ ಉಂಟಾಗುವ 36 ಸ್ಥಳಗಳನ್ನು ಬಿಬಿಎಂಪಿ ಗುರುತಿಸಿದೆ. ನೀರು ನಿಲ್ಲುವ ಎಲ್ಲ ಅಂಡರ್‌ಪಾಸ್‌ಗಳಲ್ಲಿ 36 ಕ್ಯಾಮೆರಾಗಳನ್ನು ಅಳವಡಿಸಲಾಗಿದೆ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.

ಲವಕುಶನಗರ, ವೃಷಭಾವತಿ ವ್ಯಾಲಿ, ಪಿಲಪ್ಪನಕಟ್ಟೆ ವ್ಯಾಲಿ, ಕಲ್ಯಾಣನಗರ, ಎಚ್‌ಆರ್‌ಬಿಆರ್ ಬಡಾವಣೆ, ಮಾರ್ಗನ್ ರಸ್ತೆ, ಬ್ರಿಗೇಡ್ ಜಂಕ್ಷನ್, ಆರ್‌ಆರ್‌ನಗರ, ಹೊಯ್ಸಳನಗರ, ನಾಯಂಡಹಳ್ಳಿ ಶಂಕರಪ್ಪ ಬಡಾವಣೆ, ಹೊಸಕೆರೆಹಳ್ಳಿ, ಗ್ಲೋಬಲ್ ವಿಲೇಜ್ ಸೇರಿದಂತೆ ಪ್ರವಾಹ ಉಂಟಾಗುವ ಪ್ರದೇಶಗಳನ್ನು ಗುರುತಿಸಲಾಗಿದೆ.

**'ಸರಿಯಾದ ನಿರ್ವಹಣೆಯಿಲ್ಲ':** ಪ್ರವಾಹ ಪೀಡಿತ ಪ್ರದೇಶಗಳನ್ನು ಬಿಬಿಎಂಪಿ ಸರಿಯಾಗಿ ನಿರ್ವಹಣೆ ಮಾಡದ ಕಾರಣ ಕೆಲವು ಭಾಗಗಳಲ್ಲಿ ಜನರಿಗೆ ಸಂಕಷ್ಟ ಉಂಟಾಗಲಿದೆ. ಬಿಬಿಎಂಪಿಯ ಪೂರ್ವ, ಆರ್‌ಆರ್ ನಗರ, ಪಶ್ಚಿಮ ಮತ್ತು ಮಹದೇವಪುರ ವಲಯಗಳಲ್ಲಿ ಇಂಥ ಪ್ರದೇಶಗಳು ಹೆಚ್ಚಿವೆ ಎಂದು ಸ್ಥಳೀಯರು ತಿಳಿಸಿದ್ದಾರೆ.



ನಗರದ ಮೈಸೂರು ರಸ್ತೆಯಲ್ಲಿ ಭಾರಿ ಮಳೆಯ ನಡುವೆ ವಾಹನಗಳು ಸಾಗಿದವು – ಪ್ರಜಾವಾಣಿ ಚಿತ್ರ



ಶೇಷಾದ್ರಿ ರಸ್ತೆಯಲ್ಲಿ ಪ್ರಯಾಣಿಕರು ಮಳೆಯಲ್ಲಿ ನೆನೆದುಕೊಂಡು ಬಸ್ ಏರಿದರು – ಪ್ರಜಾವಾಣಿ ಚಿತ್ರ

### ಮಳೆ ಎಲ್ಲೆಲ್ಲಿ ಹೆಚ್ಚು? (ಸೆಂ.ಮೀ.ಗಳಲ್ಲಿ)

| | |
|---|---|
| ಹಂಪಿನಗರ | 5.5 |
| ನಂದಿನಿ ಬಡಾವಣೆ | 5.2 |
| ಮಾರುತಿಮಂದಿರ | 5.05 |
| ನಾಗಪುರ | 4.95 |
| ನಾಯಂಡಹಳ್ಳಿ | 4.2 |
| ದೊಡ್ಡಬಿದರಕಲ್ಲು | 4.15 |
| ವಿದ್ಯಾಪೀಠ | 4.15 |
| ಕೊಟ್ಟಿಗೆಪಾಳ್ಯ | 4.1 |
| ಮಾರಪ್ಪನಪಾಳ್ಯ | 3.9 |
| ಕೆಂಗೇರಿ | 3.45 |
| ಕೊಡಿಗೇಹಳ್ಳಿ | 3.05 |
| ದಯಾನಂದನಗರ | 2.95 |
| ರಾಜಮಹಲ್ ಗುಟ್ಟಹಳ್ಳಿ | 2.85 |
| ಎಚ್.ಗೊಲ್ಲಹಳ್ಳಿ | 2.65 |
| ರಾಜರಾಜೇಶ್ವರಿನಗರ | 2.45 |
| ಕಾಟನ್‌ಪೇಟೆ | 2 |
| ಪೀಣ್ಯ ಕೈಗಾರಿಕೆ ಪ್ರದೇಶ | 2 |

### ಮೇ 9ರಂದು ಧರೆಗುರುಳಿದ ಮರಗಳೆಷ್ಟು?

| ವಲಯ | ಬಿದ್ದ ಮರಗಳು | ಬಿದ್ದ ಕೊಂಬೆಗಳು |
|---|---|---|
| ಆರ್.ಆರ್. ನಗರ | 32 | 63 |
| ದಕ್ಷಿಣ | 10 | 30 |
| ಪಶ್ಚಿಮ | 10 | 25 |
| ಬೊಮ್ಮನಹಳ್ಳಿ | 6 | 22 |
| ಪೂರ್ವ | 6 | 22 |
| ಯಲಹಂಕ | 3 | 5 |
| ದಾಸರಹಳ್ಳಿ | 2 | 2 |
| ಮಹದೇವಪುರ | 1 | 2 |
| ಒಟ್ಟು | 70 | 171 |

### ಪ್ರವಾಹ ಪ್ರದೇಶಗಳ ವರ್ಗೀಕರಣ

ಮಳೆಗಾಲದಲ್ಲಿ ಪ್ರವಾಹ ಉಂಟಾಗುವ ಪ್ರದೇಶಗಳನ್ನು ದುರ್ಬಲ ಮತ್ತು ಮಧ್ಯಮ ಎಂದು ವರ್ಗೀಕರಿಸಲಾಗಿದೆ.

25 ತೀವ್ರ ಪ್ರವಾಹ, 49 ಮಧ್ಯಮ ಪ್ರವಾಹ ಪ್ರದೇಶಗಳನ್ನು ಗುರುತಿಸಲಾಗಿದೆ. ಮಳೆಗಾಲಕ್ಕೆ ಮುಂಚಿತವಾಗಿ, ಬಿಬಿಎಂಪಿಯು ವಲಯ ವಿಪತ್ತು ನಿಯಂತ್ರಣ ಕೊಠಡಿಗಳನ್ನು ಸಕ್ರಿಯಗೊಳಿಸಿದೆ. ದೂರು ದಾಖಲಿಸಲು 64 ವಿಭಾಗೀಯ ವಾಟ್ಸ್‌ಆ್ಯಪ್ ಗುಂಪುಗಳನ್ನು ಕೂಡ ರಚಿಸಲಾಗಿದೆ ಎಂದು ಬಿಬಿಎಂಪಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

### ವಿಪತ್ತು ನಿಯಂತ್ರಣ ಕೊಠಡಿ ಸ್ಥಾಪನೆ

ಬಿಬಿಎಂಪಿ ವಿಪತ್ತು ನಿಯಂತ್ರಣಕ್ಕೆ ಸಿದ್ಧತೆಗಳನ್ನು ಮಾಡಿಕೊಂಡಿದೆ. ದಿನದ 24 ಗಂಟೆಯೂ ಕಾರ್ಯನಿರ್ವಹಿಸುವ ಸಹಾಯವಾಣಿ 1533 ಜೊತೆಗೆ ನಗರದ ಎಂಟೂ ವಲಯಗಳಲ್ಲೂ ಪ್ರತ್ಯೇಕ ನಿಯಂತ್ರಣ ಕೊಠಡಿಗಳನ್ನು ಸ್ಥಾಪಿಸಲಾಗಿದೆ.

**ಬೊಮ್ಮನಹಳ್ಳಿ ವಲಯ:** 080-25732447,25735642,9480685707
**ದಾಸರಹಳ್ಳಿ ವಲಯ:** 080-28394909,9480685709
**ಪೂರ್ವ ವಲಯ:** 080-22975803,9480685702
**ಮಹದೇವಪುರ ವಲಯ:** 080-28512300,9480685706
**ರಾಜರಾಜೇಶ್ವರಿ ನಗರ ವಲಯ:** 080-28601851,9480685708
**ದಕ್ಷಿಣ ವಲಯ:** 9480685704,8026566362,8022975703
**ಪಶ್ಚಿಮ ವಲಯ:** 080-23463366,23561692,9480685703
**ಯಲಹಂಕ ವಲಯ:** 080-23636671,22975936,9480685705

## ರಾಜರಾಜೇಶ್ವರಿನಗರ: ಎಸ್– ವ್ಯಾಸ್ ಕ್ಯಾಂಪಸ್ ಪ್ರಾರಂಭ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ರಾಜರಾಜೇಶ್ವರಿನಗರದ ಗ್ಲೋಬಲ್ ವಿಲೇಜ್ ಟೆಕ್ ಪಾರ್ಕ್‌ನಲ್ಲಿ ಎಸ್–ವ್ಯಾಸ್ ವಿಶ್ವವಿದ್ಯಾಲಯದ ನೂತನ ಕ್ಯಾಂಪಸ್ ಪ್ರಾರಂಭಿಸಲಾಗುವುದು' ಎಂದು ಎಸ್–ವ್ಯಾಸ ವಿಶ್ವವಿದ್ಯಾಲಯದ ಸಂಸ್ಥಾಪಕ ಕುಲಪತಿ ಎಚ್.ಆರ್. ನಾಗೇಂದ್ರ ತಿಳಿಸಿದರು.

ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಎಸ್–ವ್ಯಾಸ ವಿಶ್ವವಿದ್ಯಾಲಯದಲ್ಲಿ ಎಂಜಿನಿಯರಿಂಗ್, ಅಲೈಡ್ ಹೆಲ್ತ್‌ಕೇರ್, ಸೈಕಾಲಜಿ, ಬ್ಯುಸಿನೆಸ್ ಆ್ಯಂಡ್ ಮ್ಯಾನೇಜ್‌ಮೆಂಟ್ ಡೊಮೈನ್ಸ್ ಸೇರಿದಂತೆ 40ಕ್ಕೂ ಹೆಚ್ಚು ಹೊಸ ಕೋರ್ಸ್‌ಗಳನ್ನು ಪ್ರಾರಂಭಿಸಲಾಗುವುದು. ಪ್ರತಿಯೊಂದು ಕೋರ್ಸ್‌ನ ಪಠ್ಯಕ್ರಮವನ್ನು ಉದ್ಯಮ ತಜ್ಞರ ಸಲಹೆಗಳನ್ನು ಪಡೆದು ನಿಖರವಾಗಿ ರಚಿಸಲಾಗಿದೆ. ಕೌಶಲ ಆಧಾರಿತ ಶಿಕ್ಷಣ ನೀಡುವುದರ ಜೊತೆಗೆ ಸಂಶೋಧನೆಗೂ ಆದ್ಯತೆ ನೀಡಲಾಗುವುದು' ಎಂದು ತಿಳಿಸಿದರು.

ಮಾಜಿ ಅಥ್ಲೀಟ್ ಅಂಜು ಬಾಬಿ ಜಾರ್ಜ್, 'ಕ್ರೀಡೆಯಿಂದ ನಿವೃತ್ತಿಯಾದ ನಂತರ ಅಂಜು ಬಾಬಿ ಸ್ಪೋರ್ಟ್ಸ್ ಫೌಂಡೇಷನ್ ಮೂಲಕ ಕ್ರೀಡಾಪಟುಗಳಿಗೆ ತರಬೇತಿ ನೀಡುವ ಕೆಲಸ ಮಾಡುತ್ತಿದ್ದೇನೆ. ಈಗ ಎಸ್–ವ್ಯಾಸ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಕ್ರೀಡಾ ಕ್ಷೇತ್ರದಲ್ಲಿ ಆಸಕ್ತಿ ಇರುವ ವಿದ್ಯಾರ್ಥಿಗಳನ್ನು ತರಬೇತಿ ನೀಡುತ್ತೇವೆ. ಕ್ರೀಡಾಪಟುಗಳನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡುವಂತೆ ಪ್ರೋತ್ಸಾಹಿಸಲಾಗುವುದು' ಎಂದು ತಿಳಿಸಿದರು. ಕಡಬಮ್ಸ್ ಗ್ರೂಪ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಸಂದೇಶ್ ಕಡಬಮ್, ವಿಶ್ವವಿದ್ಯಾಲಯದ ಉಪಕುಲಪತಿ ಮಂಜುನಾಥ್ ಶರ್ಮಾ ಉಪಸ್ಥಿತರಿದ್ದರು.

## ದೇವೇಗೌಡ–ಕುಮಾರಸ್ವಾಮಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸ್ಥಾನದಿಂದ ಸಿ.ಎಂ.ಇಬ್ರಾಹಿಂ ಅವರನ್ನು ಉಚ್ಚಾಟಿಸಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡ ಮತ್ತು ಎಚ್.ಡಿ.ಕುಮಾರಸ್ವಾಮಿ ಅವರಿಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಉಚ್ಚಾಟನೆ ಮತ್ತು ಅಧ್ಯಕ್ಷ ಹುದ್ದೆಗೆ ತಾತ್ಕಾಲಿಕವಾಗಿ ಎಚ್.ಡಿ.ಕುಮಾರಸ್ವಾಮಿ ಅವರನ್ನು ನೇಮಿಸಿದ ಕ್ರಮವನ್ನು ಪ್ರಶ್ನಿಸಿ ಸಿ.ಎಂ.ಇಬ್ರಾಹಿಂ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯದಲ್ಲಿ ಅಸಲು ದಾವೆ ಸಲ್ಲಿಸಿದ್ದರು. ಈ ದಾವೆಯನ್ನು ತಿರಸ್ಕರಿಸಲಾಗಿತ್ತು.

ಈ ಆದೇಶ ರದ್ದು ಕೋರಿ ಸಿ.ಎಂ. ಇಬ್ರಾಹಿಂ ಹೈಕೋರ್ಟ್‌ನಲ್ಲಿ ನಿಯಮಿತ ಮೊದಲ ಮೇಲ್ಮನವಿ (ಆರ್‌ಎಫ್‌ಎ) ಸಲ್ಲಿಸಿದ್ದು, ಈ ಅರ್ಜಿಯನ್ನು ರಜಾ ಕಾಲದ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಸಿ.ಎಂ.ಪೂಣಚ್ಚ ಗುರುವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಜೆಡಿಎಸ್ ಪರ ಹಾಜರಿದ್ದ ಹಿರಿಯ ವಕೀಲ ಉದಯ ಹೊಳ್ಳ ಹಾಗೂ ಇಬ್ರಾಹಿಂ ಪರ ಹಿರಿಯ ವಕೀಲ ವಿಕ್ರಂ ಹುಯಿಲಗೋಳ ಅವರ ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ, ಪ್ರತಿವಾದಿಗಳಾದ ಎಚ್.ಡಿ.ದೇವೇಗೌಡ ಮತ್ತು ಎಚ್.ಡಿ.ಕುಮಾರಸ್ವಾಮಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ವಿಚಾರಣೆಯನ್ನು ಜೂನ್ 4ಕ್ಕೆ ಮುಂದೂಡಲಾಗಿದೆ.

## 'ಬೋಧಿ ಸಪ್ತಾಹ' ಇದೇ 17ರಿಂದ

**ಬೆಂಗಳೂರು:** ವೈಶಾಖ ಬುದ್ಧ ಪೂರ್ಣಿಮೆಯ ಅಂಗವಾಗಿ ಮಹಾಬೋಧಿ ಸೊಸೈಟಿ ವತಿಯಿಂದ ಇದೇ 17ರಿಂದ 23ರವರೆಗೆ 'ಬೋಧಿ ಸಪ್ತಾಹ' ಆಚರಣೆ ಮಾಡಲಾಗುವುದು ಎಂದು ಕನ್ನಡ ತಿಪಿಟಕ ಗ್ರಂಥಮಾಲಾ ಯೋಜನೆಯ ನಿರ್ದೇಶಕ ಬಿ.ವಿ. ರಾಜಾರಾಂ ಹೇಳಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಗಾಂಧಿನಗರದ ಮಹಾ ಬೋಧಿ ಸೊಸೈಟಿಯಲ್ಲಿ ಬುದ್ಧ ಪೂರ್ಣಿಮೆಯ ಅಂಗವಾಗಿ ಏಳು ದಿನ ಪಬ್ಬಜ್ಜ ತರಬೇತಿ, ತಿಪಿಟಕ ಪಠಣೆ, ರಕ್ತದಾನ ಮತ್ತು ಆರೋಗ್ಯ ಶಿಬಿರ, ವಿಚಾರಸಂಕಿರಣ, ಬುದ್ಧ ಪೂರ್ಣಿಮೆ ದಿನದಂದ ವಿಶೇಷ ಪೂಜೆ, ಪುಸ್ತಕಗಳ ಬಿಡುಗಡೆ, ಧಮ್ಮದೇಸನ, ಸಂಘದಾನ, ಮಕ್ಕಳ ಚಿತ್ರಕಲಾ ಸ್ಪರ್ಧೆಗಳು ನಡೆಯಲಿದೆ' ಎಂದು ತಿಳಿಸಿದರು.

'ಬುದ್ಧ ಪೂರ್ಣಿಮೆ ದಿನದಂದು (ಮೇ 23) 100 ಬೌದ್ಧ ಬಿಕ್ಕುಗಳ ಮೆರವಣಿಗೆಯಲ್ಲಿ ಭಕ್ತರಿಂದ ಆಹಾರ ಸ್ವೀಕರಿಸಲಿದ್ದಾರೆ. ಧಮ್ಮ ಪ್ರವಚನ ನಡೆಯಲಿದೆ' ಎಂದರು.

SESHADRIPURAM INSTITUTIONS
ADMISSIONS OPEN for 1st PUC : 2024-25

| | |
|---|---|
| SESHADRIPURAM INDEPENDENT PRE-UNIVERSITY COLLEGE | 27, Nagappa Street, Seshadripuram, Bengaluru-20. Prof. R. V. Manjunath, Principal Tel: 22955358. website: spucmain.ac.in COMMERCE: MSBA / MEBA / SEBA / CEBA SCIENCE: PCMB / PCME / PCMCs |
| SESHADRIPURAM COMPOSITE PRE-UNIVERSITY COLLEGE | 40, Girls' School Street, Seshadripuram, Bengaluru-20. Prof. G. K. Manjunath, Principal Tel: 22955365. website: scpucblr.ac.in COMMERCE: MSBA / MEBA / SEBA / CEBA SCIENCE: PCMB / PCME / PCMCs |
| SESHADRIPURAM COMPOSITE PRE-UNIVERSITY COLLEGE | Yelahanka New Town, Bengaluru-560 064. Prof. T. Doddegowda, Principal Tel: 22955372. website: www.scpuc.ac.in COMMERCE: MSBA / MEBA / SEBA / CEBA SCIENCE: PCMB / PCME / PCMCs |
| SESHADRIPURAM INDEPENDENT PRE-UNIVERSITY COLLEGE | 18, 2nd Main, Kengeri Satellite Town, Bengaluru-60. Dr. Manjunath R. Principal Tel: 22955377. website: www.spuc.ac.in COMMERCE: MEBA / SEBA / CEBA SCIENCE: PCMB / PCME / PCMCs |
| SESHADRIPURAM EVENING PRE-UNIVERSITY COLLEGE | 27, Nagappa Street, Seshadripuram, Bengaluru-20. Prof. R. Mahalakshmi, Principal Tel: 22955359. website: www.sepuc.ac.in COMMERCE: HEBA / CEBA |

N. R. Pandith Aradhya, President
Dr. Wooday P. Krishna, Honorary General Secretary

TIMKEN

ಟಿಮ್‌ಕೆನ್ ಇಂಡಿಯಾ ನಿಯಮಿತ
CIN - L29130KA1996PLC048230

ನೋಂದಣಿ ಕಛೇರಿ: 39–42, ಎಲೆಕ್ಟ್ರಾನಿಕ್ ಸಿಟಿ, ಫೇಸ್ II, ಹೊಸೂರು ರಸ್ತೆ, ಬೆಂಗಳೂರು–560 100
ದೂರವಾಣಿ : 080 41362000 ಫ್ಯಾಕ್ಸ್ : 080 41362010
ಇ–ಮೇಲ್ : tilinvestor@timken.com ವೆಬ್‌ಸೈಟ್ : www.timken.com/en-in

ಸೆಕ್ಯೂರಿಟಿಸ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯ ನಿಬಂಧನೆ 33 (ಲಿಸ್ಟಿಂಗ್ ಅನಿವಾರ್ಯತೆ ಹಾಗೂ ತೆರೆದ ದಾಖಲಾತಿ ಅವಶ್ಯಕತೆಗಳು) ರ ಅನ್ವಯ ನಿಬಂಧನೆ 2015 ರ ಆದೇಶದ ಅಡಿಯಲ್ಲಿ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ದಾಖಲಿಸಿದ ಮಾರ್ಚ್ 31, 2024ಕ್ಕೆ ಕೊನೆಗೊಂಡ ತ್ರೈಮಾಸಿಕ ಹಾಗೂ ವಾರ್ಷಿಕ ಅವಧಿಯ ಪರಿಶೋಧಿತವಾದ ಆರ್ಥಿಕ ಫಲಿತಾಂಶದ ಪ್ರತ್ಯೇಕವಾದ ಸಾರಾಂಶ

(ರೂ. ದಶಲಕ್ಷಗಳಲ್ಲಿ)

| ಕ್ರಮ ಸಂಖ್ಯೆ | ವಿವರಗಳು | 31/03/2024 ಕ್ಕೆ ಕೊನೆಗೊಂಡ ತ್ರೈಮಾಸಿಕ (ಪರಿಶೋಧಿತವಾದ) | 31/03/2024 ಕ್ಕೆ ಕೊನೆಗೊಂಡ ಪ್ರಸ್ತುತ ಸಾಲಿನ ಒಂದು ವರ್ಷದ ಅಂಕಿಗಳು (ಪರಿಶೋಧಿತವಾದ) | 31/03/2023 ಕ್ಕೆ ಕೊನೆಗೊಂಡ ತ್ರೈಮಾಸಿಕ (ಪರಿಶೋಧಿತವಾದ) |
|---|---|---|---|---|
| 1. | ಕಾರ್ಯಾಚರಣೆಯಿಂದ ಒಟ್ಟು ಆದಾಯ (ನಿವ್ವಳ) | 9,085 | 29,503 | 8,092 |
| 2. | ನಿವ್ವಳ ಲಾಭ / (ನಷ್ಟ) ಈ ಅವಧಿಗೆ (ತೆರಿಗೆ, ಅಸಾಮಾನ್ಯವಾದ ಮತ್ತು / ಅಥವಾ ಅಸಾಧಾರಣ ಬಾಬ್ತುಗಳ ಮುನ್ನ) | 1,865 | 5,242 | 1,369 |
| 3. | ನಿವ್ವಳ ಲಾಭ / (ನಷ್ಟ) ಈ ಅವಧಿಯ ತೆರಿಗೆ ಮುನ್ನ (ಅಸಾಮಾನ್ಯವಾದ ಮತ್ತು / ಅಥವಾ ಅಸಾಧಾರಣ ಬಾಬ್ತುಗಳ ನಂತರ) | 1,865 | 5,242 | 1,369 |
| 4. | ನಿವ್ವಳ ಲಾಭ / (ನಷ್ಟ) ಈ ಅವಧಿಯ ತೆರಿಗೆ ನಂತರ (ಅಸಾಮಾನ್ಯವಾದ ಮತ್ತು / ಅಥವಾ ಅಸಾಧಾರಣ ಬಾಬ್ತುಗಳ ನಂತರ #) | 1,414 | 3,921 | 1,045 |
| 5. | ಈ ಅವಧಿಯ ಒಟ್ಟು ಸಮಗ್ರ ಆದಾಯ {ಲಾಭ/(ನಷ್ಟ) ಒಳಗೊಂಡಂತೆ ಈ ಅವಧಿಗೆ (ತೆರಿಗೆ ನಂತರ) ಹಾಗೂ ಇತರೆ ಸಮಗ್ರ ಆದಾಯ (ತೆರಿಗೆ ನಂತರ)} | 1,423 | 3,914 | 1,049 |
| 6. | ಈಕ್ವಿಟಿ ಷೇರು ಬಂಡವಾಳ | 752.19 | 752.19 | 752.19 |
| 7. | ಪ್ರತಿ ಷೇರಿನ ಗಳಿಕೆಗಳು (ಪ್ರತಿ ರೂ.10/– ರಂತೆ) (ನಿರಂತರ ಕಾರ್ಯಾಚರಣೆಗಳಿಗೆ) ಮೂಲತವಾದ ಮತ್ತು ದುರ್ಬಲಗೊಳಿಸಿದ *ವಾರ್ಷಿಕವಲ್ಲದ | 18.80* | 52.13 | 13.89* |

ಮೇಲೆ ತಿಳಿಸಿರುವ ಫಲಿತಾಂಶವು ಸೆಕ್ಯೂರಿಟಿಸ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯ ನಿಬಂಧನೆ 33 (ಲಿಸ್ಟಿಂಗ್ ಅನಿವಾರ್ಯತೆ ಹಾಗೂ ತೆರೆದ ದಾಖಲಾತಿ ಅವಶ್ಯಕತೆಗಳು) ರ ಅನ್ವಯ ನಿಬಂಧನೆ 2015 ರ ಆದೇಶದ ಅಡಿಯಲ್ಲಿ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ದಾಖಲಿಸಿದ ತ್ರೈಮಾಸಿಕ ಅವಧಿಯ ಆರ್ಥಿಕ ಫಲಿತಾಂಶದ ಸಂಪೂರ್ಣವಾದ ನಮೂನೆಯ ಪ್ರತ್ಯೇಕವಾದ ಸಾರಾಂಶ. ತ್ರೈಮಾಸಿಕದ ಆರ್ಥಿಕ ಫಲಿತಾಂಶದ ಪೂರ್ಣ ನಮೂನೆಯು ಸ್ಟಾಕ್‌ಎಕ್ಸ್‌ಚೇಂಜ್ ವೆಬ್‌ಸೈಟ್‌ಗಳಲ್ಲಿ ಲಭ್ಯವಿದೆ (BSE: www.bseindia.com & NSE: www.nseindia.com) ಮತ್ತು ಕಂಪನಿ ವೆಬ್‌ಸೈಟ್ www.timken.com/en-in ನಲ್ಲಿ ವೀಕ್ಷಿಸಬಹುದು.

ಮಂಡಳಿಯ ಆದೇಶದಂತೆ
ಸಹಿ/– ಸಂಜಯ್ ಕೌಲ್
ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು
DIN : 05159352

9 ಮೇ, 2024

